ಶ್ರೀ ದುರದುಂಡೀಶ್ವರ ವಿದ್ಯಾ ಸಂವರ್ಧಕ ಸಂಘದ

# ಶ್ರೀ ಶಿವರುದ್ರೇಶ್ವರ ಕಲಾ ಹಾಗೂ ಪಟ್ಟಣ ಪಂಚಾಯತ ವಿಜ್ಞಾನ ಪದವಿ ಮಹಾವಿದ್ಯಾಲಯ ಸಂಕೇಶ್ವರ

ತಾ: ಹುಕ್ಕೇರಿ ಜಿ:ಬೆಳಗಾವಿ

## ಕನ್ನಡ ಸಂಸ್ಕೃತಿ ಅಧ್ಯಯನ ಕೇಂದ್ರ

## ವಿಶೇಷ ಉಪನ್ಯಾಸ ಮಾಲಿಕೆ

ಸ್ಥಳ: ಸಭಾಭವನ    ದಿನಾಂಕ : 09.09.2019    ವೇಳೆ : 1.30 ಗಂಟೆ

- ಉದ್ಘಾಟಣೆ : ಡಾ. ಮಲ್ಲೇಪುರಂ ಜಿ ವೆಂಕಟೇಶ
  ವಿಶ್ರಾಂತ ಕುಲಪತಿಗಳು, ಸಂಸ್ಕೃತ ವಿಶ್ವವಿದ್ಯಾಲಯ ಬೆಂಗಳೂರು
- ಮುಖ್ಯ ಅತಿಥಿಗಳು : ಡಾ. ಎಸ್. ಸಿ. ರಮೇಶ ಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ
  ಡಾ. ಸಿದ್ದಣ್ಣ ಉತ್ನಾಳ,ಪ್ರಸಾರಂಗದ ಸಲಹೆಗಾರರು, ಕನ್ನಡ ವಿಶ್ವವಿದ್ಯಾಲಯ, ಹಂಪಿ
- ಅಧ್ಯಕ್ಷರು : ಶ್ರೀ. ಜಿ. ಎಸ್. ಇಂಡಿ, ಉಪಾಧ್ಯಕ್ಷರು,
  ಎಸ್. ಡಿ. ವ್ಹಿ. ಎಸ್. ಸಂಘ, ಸಂಕೇಶ್ವರ
- ಉಪಸ್ಥಿತಿ :
  1) ಡಾ. ಪಿ. ಆರ್. ಹಿರೇಮಠ ಪ್ರಾಚಾರ್ಯರು
  2) ಶ್ರೀ. ಜಿ. ಎಸ್. ಮುಡಶಿ
  3) ಶ್ರೀ. ಆರ್. ಬಿ. ಪಾಟೀಲ
  4) ಶ್ರೀ. ಡಿ. ಎಸ್. ಕೇಸ್ತಿ
  5) ಶ್ರೀ. ಜಿ. ಸಿ. ಕೋಟಗಿ
  6) ಡಾ. ಬಿ. ಎ. ಪೂಜಾರ
- ಸಂಯೋಜಕರು : ಡಾ. ವ್ಹಿ. ಡಿ. ನಾಗನೂರಿ
  ಪ್ರೊ. ದೇಮಣ್ಣ ಸೊಗಲದ

Scanned by CamScanner

ವಿಶೇಷ ಉಪನ್ಯಾಸ ಮಾಲಿಕೆಯನ್ನು ಉದ್ಘಾಟಿಸುತ್ತಿರುವ ಡಾ. ಮಲ್ಲಿಕಾರ್ಜುನ [illegible]



ಉದ್ಘಾಟನಾ ಪರ ನುಡಿಗಳನ್ನಾಡುತ್ತಿರುವ ವಿಶ್ರಾಂತ ಕುಲಪತಿ, [illegible] ಡಾ. ಮಲ್ಲಿಕಾರ್ಜುನ [illegible]




Scanned by CamScanner

# ಬಸಗೌಡ ಪಾಟೀಲರ ಹೆಸರಲ್ಲಿ ಸಂಶೋಧನಾ ಕೇಂದ್ರ

ದುರದುಂಡೀಶ್ವರ ವಿದ್ಯಾ ಸಂವರ್ಧಕ ಸಂಘದ ಎಸ್. ಎಸ್. ಕಲಾ ಹಾಗೂ ಟಿ. ಪಿ. ವಿಜ್ಞಾನ ಮಹಾವಿದ್ಯಾಲಯ, ಸಂಕೇಶ್ವರ. ಕನ್ನಡ ವಿಭಾಗದ ವತಿಯಿಂದ "ಕನ್ನಡ ಸಂಸ್ಕೃತಿ ಅಧ್ಯಯನ ಕೇಂದ್ರ" ವಿಶೇಷ ಉಪನ್ಯಾಸ ಮಾಲಿಕೆ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಲಾಯಿತು. ಈ ಕಾರ್ಯಕ್ರಮ ಉದ್ಘಾಟಿಸಿದ 'ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರಿನ ವಿಶ್ರಾಂತ ಕುಲಪತಿ, ಹೆಸರಾಂತ ವಿದ್ವಾಂಸ 'ಡಾ. ಮಲ್ಲೇಪುರಂ, ಜಿ. ವೆಂಕಟೇಶ' ಸಂಕೇಶ್ವರದಂತಹ ಗಡಿಭಾಗದಲ್ಲಿ ಅದ್ಭೂತ ಪರಿಸರಸ್ನೇಹಿ ಸ್ಥಳದಲ್ಲಿ ಮಹಾವಿದ್ಯಾಲಯ ಸ್ಥಾಪಿಸಿದ ಮಹನಿಯರಾದ ಎಂ. ಪಿ. ಪಾಟೀಲ, ಬಸಗೌಡ ಪಾಟೀಲ ಹಾಗೂ ನಿಡಸೋಸಿಯ ಜಗದ್ಗುರುಗಳ ಪ್ರಯತ್ನ ಮಹತ್ವದು ಎಂದು ಸ್ಮರಿಸಿ ಬಸಗೌಡಾ ಪಾಟೀಲರ ಹೆಸರಿನಲ್ಲಿ ಒಂದು ಸಂಸೋಧನ ಕೇಂದ್ರ ಸ್ಥಾಪಿಸಿ ಅವರಿಗೆ ಗೌರವ ಸಲ್ಲಿಸಬೇಕೆಂದರು ಗಡಿಭಾಗದ ಜನರ, ಸಂಸ್ಕೃತಿ, ಬಹುಭಾಷಾ ತಿಳುವಳಿಕೆ ಹೊಸ ರೀತಿಯ ಆಲೋಚನೆಗಳಿಗೆ ನಾಂದಿಯಾಗುತ್ತದೆ. ಅದನ್ನು ಇನ್ನಷ್ಟು ಬಲಪಡಿಸಲು ಸಂಶೋಧನೆ ಅಗತ್ಯ ಅಂತಹ ಕಾರ್ಯ ಮಹಾವಿದ್ಯಾಲಯದಲ್ಲಿ ನಡೆಯುತ್ತಿರುವುದು ಸಂತೋಷದ ಸಂಗತಿ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಹಾಗೂ ನಾಡಿನ ಜನಪದ ವಿದ್ವಾಂಸ ಡಾ. ಎಸ್. ಸಿ. ರಮೇಶ, ಜನಪದ ಅಂಶಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸಂಶೋಧನೆ ನಡೆಯಬೇಕಿದೆ. ಜಾನಪದ ಒಂದು ಮೌಢ್ಯವಲ್ಲ ಅದೊಂದು ವಿಜ್ಞಾನ" ಗಡಿ ಅಂಚಿನ ಜನ ನಾಡು ನುಡಿಯ ಬಗ್ಗೆ ಅಪಾರ ಪ್ರೀತಿ, ಗೌರವ ಕನ್ನಡ ವಿಶ್ವವಿದ್ಯಾಲಯಕ್ಕೆ ಇದೆ. ಈ ಸುಂದರ ಪರಿಸರದಲ್ಲಿ ಅನೇಕ ರೀತಿಯ ಕೋರ್ಸಗಳನ್ನು ತೆರೆಯಲು ವಿಶ್ವವಿದ್ಯಾಲಯ ಉತ್ಸುಕವಾಗಿದೆ. ಮಹಾವಿದ್ಯಾಲಯ ಬಯಸಿದ್ದಲ್ಲಿ ಮಾನ್ಯತಾ ಕೇಂದ್ರ ಮಾಡಿ ಸಂಶೋಧನೆಗೆ ಇಂಬು ನೀಡಲು ಸಿದ್ದರಿದ್ದೇವೆ. ಎಂದು ನುಡಿದರು.

ನಂತರ ಅಧ್ಯಕ್ಷತೆ ವಹಿಸಿದ್ದ ದು. ವಿ. ಸಂ. ಸಂಘದ ಉಪಾಧ್ಯಕ್ಷರಾದ ಶ್ರೀ. ಜಿ. ಎಸ್. ಇಂಡಿ ಅವರ ಪರವಾಗಿ ಆಡಳಿತ ಮಂಡಳಿ ಸದಸ್ಯರಾದ. ಆರ್. ಬಿ. ಪಾಟೀಲ, ಸಂಸ್ಥೆ ಹಾಗೂ ಮಹಾವಿದ್ಯಾಲಯದ ಅಭಿವೃದ್ಧಿಗೆ ಪೂರಕವಾದ ಅನೇಕ ಕೋರ್ಸಗಳನ್ನು ತೆರೆಯಲು ಆಡಳಿತ ಮಂಡಳಿ ಸಿದ್ದವಿದೆ. ಈ ವಿಷಯವಾಗಿ ವಿಶ್ವವಿದ್ಯಾಲಯಕ್ಕೆ ಶುಭ ಸಂದೇಶ ನೀಡುತ್ತೆವೆಂದು ತಿಳಿಸಿದರು. ಇನ್ನೋರ್ವ ಅತಿಥಿ ಡಾ. ಸಿದ್ದಣ್ಣ ಉತ್ನಾಳ ಬಸಗೌಡ ಪಾಟೀಲರ ಹೆಸರಿನಲ್ಲಿ ಸಂಶೋಧನಾ ಕೇಂದ್ರ ಸ್ಥಾಪನೆಯಾಗಲಿ ಎಂದು ಒತ್ತಾಯಿಸಿದರು.

ಕಾರ್ಯಕ್ರಮದಲ್ಲಿ ಶ್ರೀ. ಜಿ. ಎಸ್. ಕೋಟಗಿ ಕಾರ್ಯದರ್ಶಿಗಳು ಆಡಳಿತಾಧಿಕಾರಿಗಳಾದ ಡಾ. ಬಿ. ಎ. ಪೂಜಾರ, ಶ್ರೀ. ಆರ್. ಬಿ. ಪಾಟೀಲ, ಶ್ರೀ. ಎಲ್. ಕೆ. ಖೋತ ಕಾಲೇಜಿನ ಪ್ರಾಚಾರ್ಯರಾದ ಶ್ರೀಮತಿ. ಡಾ. ಎಸ್. ಆಯ್. ಮಡಿವಾಳಪ್ಪಗೋಳ, ಡಾ. ಈ. ಎಸ್. ಮರಿಗುದ್ದಿ, ಪ್ರೊ. ಎಲ್. ವ್ಹಿ. ಪಾಟೀಲ, ಮಹಾವಿದ್ಯಾಲಯದ ಬೋಧಕ, ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು. ಪ್ರಾಚಾರ್ಯರಾದ ಡಾ. ಪಿ. ಆರ್. ಹಿರೇಮಠ ಸ್ವಾಗತ ಹಾಗೂ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಪ್ರೊ. ದೇಮಣ್ಣ ಸೊಗಲದ ವಂದಿಸಿದರು, ಡಾ. ವ್ಹಿ. ಡಿ. ನಾಗನೂರಿ ನಿರೂಪಿಸಿದರು.

Scanned by CamScanner

ಸಾಹಿತ್ಯ ಅಕಾಡೆಮಿ ನವದೆಹಲಿ

ಹಾಗೂ

ಶ್ರೀ ದುರದುಂಡೀಶ್ವರ ವಿದ್ಯಾ ಸಂವರ್ಧಕ ಸಂಘದ

## ಶ್ರೀ ಶಿವರುದ್ರೇಶ್ವರ ಕಲಾ ಹಾಗೂ ಪಟ್ಟಣ ಪಂಚಾಯತ ವಿಜ್ಞಾನ ಪದವಿ ಮಹಾವಿದ್ಯಾಲಯ

ಸಂಕೇಶ್ವರ

ತಾ; ಹುಕ್ಕೇರಿ ಜಿ:ಬೆಳಗಾವಿ

ಇವರ ಸಹಯೋಗದಲ್ಲಿ

## ಸಾಹಿತ್ಯ ವೇದಿಕೆ ಕಾರ್ಯಕ್ರಮ

ಕಾಲೇಜಿನ ಸಭಾಭವನ ಸಂಕೇಶ್ವರ

ದಿನಾಂಕ : 14.09.2019 ವೇಳೆ : 12.00 ಗಂಟೆ

## – :ಕನ್ನಡ ಸಾಹಿತ್ಯದ ಸಂಶೋಧನಾ ವೈಧಾನಿಕತೆ: –

- ಸ್ವಾಗತ ಗೀತೆ : ಕು. ಅಂಬಿಕಾ ಹಾಗೂ ಸಂಗಡಿಗರು
- ಸ್ವಾಗತ ಮತ್ತು ಪರಿಚಯ ನುಡಿ : ಡಾ. ವ್ಹಿ ಡಿ. ನಾಗನೂರಿ
- ~~ಪುಷ್ಪಾರ್ಪಣೆ~~ [illegible] : 1) 2) 3)
- ಪ್ರಾಸ್ತಾವಿಕ ನುಡಿ : ಡಾ. ಬಾಳಾಸಾಹೇಬ ಲೋಕಾಪುರ ಸದಸ್ಯರು ಕನ್ನಡ ಸಲಹಾ ಸಮಿತಿ ಸಾಹಿತ್ಯ ಅಕಾಡೆಮಿ
- ಉಪನ್ಯಾಸ : ಡಾ. ಪ್ರಕಾಶ ಗಿರಿಮಲ್ಲಣ್ಣವರ ವಿಮರ್ಶಕರು ಬೆಳಗಾವಿ
- ಉಪಸ್ಥಿತಿ : ಡಾ. ಗುರುಪಾದ ಮರಿಗುದ್ದಿ
  ಪ್ರೊ. ಎಲ್. ವ್ಹಿ. ಪಾಟೀಲ
  ಹಮೀದಾಬೇಗಂ ದೇಸಾಯಿ
- ಸತ್ಕಾರ : ಡಾ. ಬಾಳಾಸಾಹೇಬ ಲೋಕಾಪುರ ಸದಸ್ಯರು ಕನ್ನಡ ಸಲಹಾ ಸಮಿತಿ ಸಾಹಿತ್ಯ ಅಕಾಡೆಮಿ
  ಡಾ. ಪ್ರಕಾಶ ಗಿರಿಮಲ್ಲಣ್ಣವರ ವಿಮರ್ಶಕರು ಬೆಳಗಾವಿ
- ಅಧ್ಯಕ್ಷರ ನುಡಿ : ಶ್ರೀ. ಜಿ. ಸಿ. ಕೋಟಗಿ, ಕಾರ್ಯದರ್ಶಿಗಳು
  ಎಸ್. ಡಿ. ವ್ಹಿ. ಎಸ್. ಸಂಘ, ಸಂಕೇಶ್ವರ
- ವಂದನಾರ್ಪಣೆ : ಪ್ರೊ. ದೇಮಣ್ಣ ಸೊಗಲದ
- ನಿರೂಪಣೆ : ಕು. ಸರಿತಾ ಪಾಟೀಲ

Scanned by CamScanner

# ಸಾಹಿತ್ಯ ಅಕಾದೆಮಿ ನವದೆಹಲಿ

ಹಾಗೂ

## ಶ್ರೀ. ದು. ವಿ. ಸಂಘದ ಶ್ರೀ ಶಿವರುದ್ರೇಶ್ವರ ಕಲಾ ಹಾಗು ಪಟ್ಟಣ ಪಂಚಾಯತ ವಿಜ್ಞಾನ ಮಹಾವಿದ್ಯಾಲಯ ಸಂಕೇಶ್ವರ

ಇವರ ಸಹಯೋಗದಲ್ಲಿ

## ಸಾಹಿತ್ಯ ವೇದಿಕೆ ಕಾರ್ಯಕ್ರಮ

ದಿನಾಂಕ : ೧೪ ಸಪ್ಟಂಬರ ೨೦೧೯ ಶನಿವಾರ ಮುಂಜಾನೆ ೧೧-೩೦ ಕ್ಕೆ

ಸ್ಥಳ : ಕಾಲೇಜಿನ ಸಭಾಭವನ ಸಂಕೇಶ್ವರ

# ಕನ್ನಡ ಸಾಹಿತ್ಯದ ಸಂಶೋಧನಾ ವೈಧಾನಿಕತೆ

ಸ್ವಾಗತ ಮತ್ತು ಪ್ರಾಸ್ತಾವಿಕ : ಡಾ. ಬಾಳಾಸಾಹೇಬ ಲೋಕಾಪುರ
ಸದಸ್ಯರು, ಕನ್ನಡ ಸಲಹಾ ಸಮಿತಿ ಸಾಹಿತ್ಯ ಅಕಾದೆಮಿ

ಉಪನ್ಯಾಸ : ಡಾ. ಪ್ರಕಾಶ ಗಿರಿಮಲ್ಲಣ್ಣವರ
ವಿಮರ್ಶಕರು, ಬೆಳಗಾವಿ

ಉಪಸ್ಥಿತಿ : ಡಾ. ಗುರುಪಾದ ಮರಿಗುದ್ದಿ
ಪ್ರೊ. ಎಲ್. ವಿ. ಪಾಟೀಲ
ಹಮೀದಾ ಬೇಗಮ್ ದೇಸಾಯಿ
ಡಾ. ವಿಜಯಮಾಲಾ ನಾಗನೂರಿ

ಅಧ್ಯಕ್ಷತೆ : ಡಾ. ಪಿ ಆರ್. ಹಿರೇಮಠ
ಪ್ರಾಚಾರ್ಯರು

ಆತ್ಮೀಯ ಸ್ವಾಗತ

ಅಕಾದೆಮಿ ಪ್ರಾದೇಶಿಕ ಕಚೇರಿ

Scanned by CamScanner

ಪ್ರಾಸ್ತಾವಿಕ ಹಾಗೂ ಸ್ವಾಗತ ಭಾಷಣ ಮಾಡುತ್ತಿರುವ, ಕೇಂದ್ರ ಸಾಹಿತ್ಯ ಅಕಾಡೆಮಿಯ
ಸದಸ್ಯ ಹಾಗೂ ಕತೆಗಾರ ಡಾ. ಬಾಳಾಸಾಹೇಬ ಲೋಕಾಪುರ




ಮುಖ್ಯ ಅತಿಥಿ ಹಾಗೂ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಪ್ರಕಾಶ ಗಿರಿಮಲ್ಲನವರ
ಸಾಹಿತಿಗಳು ಬೆಳಗಾವಿ 'ಸಂಶೋಧನಾ ವೈಧಾನಿಕತೆ' ಕುರಿತ ಭಾಷಣ ಮಾಡುತ್ತಿರುವುದು




Scanned by CamScanner

ಮಹಾವಿದ್ಯಾಲಯದ ವತಿಯಿಂದ ಕೇಂದ್ರ ಸಾಹಿತ್ಯ ಅಕಾಡೆಯ ಸದಸ್ಯ ಡಾ. ಬಾಳಾಸಾಹೇಬ ಲೋಕಾಪುರ ಅವರಿಗೆ ಸನ್ಮಾನ




ಮಹಾವಿದ್ಯಾಲಯದ ವತಿಯಿಂದ ಪ್ರಕಾಶ ಗಿರಿಮಲ್ಲಣ್ಣವರ, ಮುಖ್ಯ ಭಾಷಣಕಾರರು ಅವರಿಗೆ. ಸನ್ಮಾನ




Scanned by CamScanner

## ಪತ್ರಿಕಾ ಪ್ರಕಟಣೆ

## ಸತ್ಯ ಮತ್ತು ಪ್ರಾಮಾಣಿಕತೆಗಳು ಸಂಶೋಧನೆಯ ಶಕ್ತಿಗಳು

ಸಂಕೇಶ್ವರ

ಸತ್ಯ ಮತ್ತು ಪ್ರಾಮಾಣಿಕತೆಗಳು ಸಂಶೋಧನೆಯ ಶಕ್ತಿಗಳಾಗಿವೆ. ಸಂಶೋಧನೆಯು ಗಟ್ಟಿತನದಿಂದ ಕೂಡಿರಬೇಕಾದರೆ ಇವುಗಳ ಪಾತ್ರ ಮಹತ್ವದ್ದು ಎಂದು ಬೆಳಗಾವಿಯ ಡಾ. ಪ್ರಕಾಶ ಗಿರಿಮಲ್ಲನ್ನವರ ಹೇಳಿದರು. ಅವರು ಸ್ಥಳಿಯ ಎಸ್. ಡಿ. ವ್ಹಿ. ಎಸ್. ಸಂಘದ ಎಸ್. ಎಸ್. ಕಲಾ ಹಾಗೂ ಟಿ. ಪಿ. ವಿಜ್ಞಾನ ಮಹಾವಿದ್ಯಾಲಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಇವುಗಳ ಸಹಯೋಗದಲ್ಲಿ ಕನ್ನಡ ವಿಭಾಗದ ವತಿಯಿಂದ ಹಮ್ಮಿಕೊಂಡ **ಕನ್ನಡ ಸಾಹಿತ್ಯದ ಸಂಶೋಧನೆ ಮತ್ತು ವೈದಾನಿಕತೆ** ಎಂಬ ವಿಷಯದ ಮೇಲೆ ವಿಶೇಶ ಉಪನ್ಯಾಸ ನೀಡಿದರು. ಕನ್ನಡ ಸಂಶೋಧನೆಗೆ ಸುದೀರ್ಘ ಇತಿಹಾಸವಿದೆ. ಕಿಟೆಲ್ ಡಿ. ಎಲ್. ನರಸಿಂಹಾಚಾರ್ಯ ಆ. ನೆ. ಉಪಾಧ್ಯೆ ಶಂಬಾ ಜೋಶಿ ಎಮ್. ಎಮ್. ಕಲಬುರ್ಗಿ ಅಂತಹ ಮಹನಿಯರು ಈ ಕ್ಷೇತ್ರದಲ್ಲಿ ಸಾಕಷ್ಟು ದುಡದಿದ್ದಾರೆ. ವೃದಾನಿಕತೆ ಎನ್ನುವುದು ಸಂಶೋಧನೆಯ ಪಾರಿಭಾಷಿಕ ಪದವಾಗಿದ್ದು ವಿಧಾನ ಎನ್ನುವ ಅರ್ಥವನ್ನು ನೀಡುತ್ತದೆ. ಕನ್ನಡ ವಿಶ್ವವಿದ್ಯಾಲಯವು ಈ ಪ್ರಕ್ರಿಯೆಯನ್ನು ಸಂಶೋಧನೆಯ ಅಧ್ಯಯನಕ್ಕೆ ಅಳವಡಿಸಿದೆ. ಮೈಸೂರು ಮಾದರಿ ಧಾರವಾಡ ಮಾದರಿಯನ್ನು ಇಟ್ಟುಕೊಂಡು ಹಲವು ಸಂಶೋಧನೆಗಳು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ನಡೆದಿರುತ್ತದೆ. ಸಂಶೋಧನೆ ಎನ್ನುವುದು ಅಲ್ಪವಿರಾಮ ಅರ್ಧವಿರಾಮದಿಂದ ಪೂರ್ಣವಿರಾಮದ ಕಡೆಗೆ ಸಾಗುತ್ತದೆ. ಸಂಶೋಧಕ ತಪ್ಪು ಹೇಳಬಹುದು ಆದರೆ ಸುಳ್ಳು ಹೇಳಲಾರ ಇವು ಎಮ್. ಎಮ್. ಕಲಬುರ್ಗಿ ಅವರು ಹೇಳಿದ ಸಂಶೋಧನೆ ಕುರಿತಾದ ವ್ಯಾಖ್ಯೆಗಳಾದರು ಇವತ್ತಿನ ಯುವ ಸಂಶೋಧಕರಿಗೆ ಸಿದ್ದ ಸೂತ್ರಗಳಾಗಿವೆ. ಅದನ್ನು ಮುಂದಿಟ್ಟುಕೊಂಡು ಡಾ. ಎಮ್. ಎಮ್. ಕಲಬುರ್ಗಿಯವರ ಮಾರ್ಗ ಸಂಪುಟಗಳನ್ನು ಓದಿಕೊಂಡು ವಿದ್ಯಾರ್ಥಿಗಳು ಸಂಶೋಧನೆಯಲ್ಲಿ ತೊಡಗಿಕೊಂಡರೆ ಸಂಶೋಧನೆಗೆ ಒಂದು ತೂಕ ಬರುತ್ತದೆ ಎಂದು ಅಭಿಪ್ರಾಯ ಪಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಎಸ್. ಡಿ. ವ್ಹಿ. ಎಸ್. ಸಂಘದ ಕಾರ್ಯದರ್ಶಿಗಳಾದ ಶ್ರೀ. ಜಿ. ಸಿ. ಕೋಟಗಿ, ಅವರು ಮಾತನಾಡುತ್ತ ಕನ್ನಡ ಸಾಹಿತ್ಯದಲ್ಲಿ ವಚನಕಾರರು ಅವರಿಂದ ರಚಿಸಲ್ಪಟ್ಟ ವಚನಗಳು ಕನ್ನಡದ ಒಟ್ಟು ಸಾಂಸ್ಕೃತಿಕ ಸಾಮಾಜಿಕ ಧಾರ್ಮಿಕ ವಿಚಾರಗಳನ್ನು ತಿಳಿದುಕೊಳ್ಳಲು ಶ್ರೇಷ್ಠವಾದ ಆಕರಗಳಾಗಿವೆ ಆ ನಿಟ್ಟಿನಲ್ಲಿ ಇಂದು ಹೆಚ್ಚಿನ ಅಧ್ಯಯನಗಳು ನಡೆದು ಶರಣರ ಮಾನವೀಯ ವಿಚಾರಗಳನ್ನು ಸಂಶೋಧನೆಯ ಮೂಲಕ ಸಮಾಜಕ್ಕೆ ತಿಳಿಸಿಕೊಡಬೇಕಾಗಿದೆ ಎಂದು ಹೇಳಿದರು. ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರು ಶ್ರೇಷ್ಠ ಕತೆಗಾರರಾದ ಡಾ. ಬಾಳಾಸಾಹೇಬ ಲೋಕಾಪುರ ಅವರು ಕೇಂದ್ರ ಸಾಹಿತ್ಯದ ಹುಟ್ಟು ಪ್ರಸ್ತುತ ಅಕಾಡೆಮಿ ಮಾಡುತ್ತಿರುವ ಕಾರ್ಯಕ್ರಮಗಳ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಆಡಳಿತ ಮಂಡಳಿಯ ಸದಸ್ಯರಾದ ಶ್ರೀ. ವಿಶ್ವನಾಥ ತೋಡಕರ ಕಾರ್ಯನಿರ್ವಹಣಾಧಿಕಾರಿಗಳಾದ ಡಾ. ಬಿ. ಎ. ಪೂಜಾರಿ, ಸಾಹಿತಿ ಎಲ್. ವ್ಹಿ. ಪಾಟೀಲ, ಶ್ರೀಮತಿ. ಹಮೀದಾಬೇಗಂ ದೇಸಾಯಿ, ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಹಾಜರಿದ್ದರು. ಕಾರ್ಯಕ್ರಮ ಸಂಯೋಜಕರಾದ ಡಾ. ವ್ಹಿ. ಡಿ. ನಾಗನೂರಿ ಕಾರ್ಯಕ್ರಮಕ್ಕೆ ಸರ್ವರನ್ನು ಸ್ವಾಗತಿಸಿದರು. ಡಾ. ಜೆ. ಎಸ್. ಮರಿಗುದ್ದಿ ಪರಿಚಯ ನುಡಿಗಳನ್ನಾಡಿದರು. ಪ್ರೊ. ದೇಮಣ್ಣ ಸೊಗಲದ ವಂದಿಸಿದರು, ಕು. ಹೀನಾ ನೂಲಕರ ನಿರೂಪಿಸಿದರು.

Scanned by CamScanner